# ಪ್ರಾಚೀನ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಪರಂಪರೆ

**ಮಹಾಂತೇಶ ಮ. ಅಕ್ಕಿ[1] & ನಿರ್ಮಲಾ ಶೀಲವಂತರ[2]**

[1]ಮುಖ್ಯಸ್ಥರು, ಇತಿಹಾಸ ವಿಭಾಗ, ಎಂ. ಎ. ಎಸ್. ಸಿ. ಮಹಾವಿದ್ಯಾಲಯ, ಹಂಸಭಾವಿ, ಹಾವೇರಿ.

[2]ಉಪನ್ಯಾಸಕಿ, ಕನ್ನಡ ವಿಭಾಗ, ಜೆ.ಎಸ್.ಎಸ್. ಪದವಿ ಮಹಾವಿದ್ಯಾಲಯ, ವಿದ್ಯಾಗಿರಿ, ಧಾರವಾಡ.

**DOI: https://doi.org/10.5281/zenodo.18008037**

## ABSTRACT:

ಪ್ರಾಚೀನ ಭಾರತದ ಇತಿಹಾಸದ ಬೆಳವಣಿಗೆ ಮತ್ತು ಕನ್ನಡ ಸಾಹಿತ್ಯ ಪರಂಪರೆಯ ಉದಯ ಮತ್ತು ವಿಕಾಸವನ್ನು ವಿಶ್ಲೇಷಿಸುತ್ತದೆ. ಶಾಸನಗಳು, ತಾಮ್ರಪಟಗಳು, ನಾಣ್ಯಗಳು ಮತ್ತು ಪುರಾತತ್ವ ಸಾಕ್ಷ್ಯಗಳ ಮೂಲಕ ಪ್ರಾಚೀನ ಕನ್ನಡ ಪ್ರದೇಶದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವನ್ನು ಅರಿಯಲು ಸಾಧ್ಯವಾಗುತ್ತದೆ. ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಹಿತ್ಯಕ್ಕೆ ರಾಜಾಶ್ರಯ ದೊರಕಿತು. ಪಂಪ, ರನ್ನ, ಜನ್ನ ಮೊದಲಾದ ಕವಿಗಳು ಮಹಾಕಾವ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದರು. ಜೈನ ಮತ್ತು ವೈದಿಕ ಸಂಸ್ಕೃತಿಯ ಪ್ರಭಾವದಿಂದ ನೀತಿ, ಧರ್ಮ, ವೀರತ್ವ ಹಾಗೂ ರಾಜಧರ್ಮವು ಸಾಹಿತ್ಯದ ಪ್ರಮುಖ ವಿಷಯಗಳಾಗಿ ರೂಪಗೊಂಡವು. ಪ್ರಾಚೀನ ಇತಿಹಾಸದ ಘಟನೆಗಳು ಮತ್ತು ಸಮಾಜದ ಮೌಲ್ಯಗಳು ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಗೊಂಡಿದ್ದು, ಸಾಹಿತ್ಯವು ಆ ಕಾಲದ ಜನಜೀವನ ಮತ್ತು ಸಂಸ್ಕೃತಿಯ ಜೀವಂತ ದಾಖಲೆಯಾಗಿದೆ. ಹೀಗಾಗಿ ಪ್ರಾಚೀನ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಪರಂಪರೆ ಪರಸ್ಪರ ಪೂರಕವಾಗಿದ್ದು, ಒಂದನ್ನು ತಿಳಿಯದೇ ಮತ್ತೊಂದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬುದೇ ಈ ಲೇಖನದ ಕೇಂದ್ರ ಸಾರ.

## KEYWORDS:

ಪ್ರಾಚೀನ ಸಾಹಿತ್ಯ ಪರಂಪರೆ, ಶಿಲಪ್ಪಾದಿಕಾರಂ, ಕರ್ನಾಟೇಶ್ವರ ಕಥಾ, ಶಾಸನಗಳು, ವಡ್ಡಾರಾಧನೆ.

### ಪ್ರಾಚೀನ ಸಾಹಿತ್ಯ ಪರಂಪರೆ:

ಕನ್ನಡ ಸಾರಸ್ವತ ಲೋಕಕ್ಕೆ ಕನ್ನಡ ಸಾಹಿತ್ಯ ದೇವಿಯು ಸಾಹಿತ್ಯದ ಹಲವಾರು ಪ್ರಕಾರಗಳನ್ನಾಗಿ ಕವಲೊಡೆದು ಕನ್ನಡ ಸಾಹಿತ್ಯವು ನಂದಾದೀವಿಗೆಯಂತೆ ಕಂಗೊಳಿಸುತ್ತಿದ್ದಾಳೆ. ಕನ್ನಡ ಭಾಷೆ ಸಂಸ್ಕೃತ ಜನ್ಯ ಎಂಬ ಅಭಿಪ್ರಾಯವಿದ್ದರೂ ಇದು ಮೂಲ ದ್ರಾವಿಡದಿಂದ ಕವಲೊಡೆದ ಭಾಷೆಯೆಂಬುದು ಭಾಷಾ ತಜ್ಞರ ಸಿದ್ಧಾಂತ. ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯವೆಂದರೆ ಒಂದರ್ಥದಲ್ಲಿ ಅದು ಸಾಹಿತ್ಯದ ಉದಯವೇ. ಸಾಹಿತ್ಯ ಚರಿತ್ರೆಯಲ್ಲಿ ಜನಪದ ದೃಷ್ಟಿಯಿಂದ ಅದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಬಹುಶಃ ಎಲ್ಲ ಪಳಗಿದ ಭಾಷೆಗಳಲ್ಲಿ ಇರುವಂತೆ ಕನ್ನಡ ಭಾಷೆಯಲ್ಲಿಯೂ ಕೂಡ ಜನಪದ ಸಾಹಿತ್ಯವು ತೀರ ಪ್ರಾಚೀನ ವಿಪುಲ ಹಾಗೂ ವೈವಿಧ್ಯಮಯವಾಗಿದೆ. ಕ್ರಿ.ಶ. 7ನೇ ಶತಮಾನದ ತ್ರಿಪದಿಗಳು, 8ನೇ ಶತಮಾನದ ಓವನಿಗೆ–ಒನಕೆವಾಡು, 9ನೇ ಶತಮಾನದ ಬೆದಂಡೆ–ಚತ್ತಾಣಗಳಲ್ಲಿಯ ಕನ್ನಡ ಛಂದೋರೂಪಗಳು ಹಾಗೂ ಕ್ರಿ.ಶ. 2ನೇ ಶತಮಾನದಲ್ಲಿ ರಚಿತವಾದ 'ಶಿಲಪ್ಪಾದಿಕಾರಂ' ಎಂಬ ಹೆಸರಿನ ತಮಿಳು ಕೃತಿಯಲ್ಲಿ ವರ್ಣಿಸಲಾದ ನಿದರ್ಶನಗಳು ಕನ್ನಡ ಭಾಷೆಯ

ಮೂಲಕ್ಕೆ ಸಾಕ್ಷಿಯಾಗಿದೆ. ಇದರ ಜೊತೆಗೆ ದೊರೆಯುವ ಹಲವು ಆಕರಗಳು, ದಾಖಲೆಗಳು, ಪುರಾವೆಗಳು ಕನ್ನಡದ ಪ್ರಾಚೀನತೆಯನ್ನು ನಿರ್ಧರಿಸುವಲ್ಲಿ ನಮಗೆ ಸಹಕಾರಿಯಾಗುತ್ತವೆ.

**ಕರ್ನಾಟಕದ ಅರ್ಥ:**

ಈ ಮೇಲಿನ ಎಲ್ಲ ಕೃತಿಗಳನ್ನು ಆಧರಿಸಿ 'ಕರ್ನಾಟಕ' ಎಂಬ ಹೆಸರನ್ನು ಸಂಶೋಧಿಸಿ ಅದರ ನಿಷ್ಪತ್ತಿಯನ್ನು ಹೀಗೆ ಕಂಡುಕೊಳ್ಳಲಾಗಿದೆ. 'ಕರ್ಣ' ಮತ್ತು 'ನಾಟ' ಪದ ಸಂಯೋಜನೆಯೋ ಕರ್ನಾಟಕ ಅಂದರೆ ಎರಡು ಜನಾಂಗಗಳಿಂದಾಗಿ ಈ ಹೆಸರು ಬಂತೆಂಬುವುದು ವಾದ. ಕರ್ಣೇಷು+ಆಟ ಕಿವಿಗೆ ಹೊಡೆಯುವ ಅಥವಾ ಖ್ಯಾತವಾದ ನಾಡು ಎಂಬ ಕಲ್ಪನೆಯಿಂದ ಈ ಹೆಸರು ಬಂತೆಂಬ ಜಿಜ್ಞಾಸೆ. ಕಮ್+ನಾಡು–ಕಮ್ಮಿತ್ತು ನಾಡು–ಸುವಾಸನೆಯ ಪ್ರದೇಶ ಎಂಬ ವರ್ಣನೆಯಿಂದ ಈ ಅರ್ಥ ಬಂತೆಂಬ ತರ್ಕ. ಕರಿ+ನಾಡು=ಕರುನಾಡು–ಕಪ್ಪು ಮಣ್ಣಿನ ನೆಲ > ಕರುನಾಡು ಆಗಿರಬೇಕೆಂಬ ಚರ್ಚೆ.

“ಕ್ರಿ.ಶ. 450 ರ ಕದಂಬ ವಿಷ್ಣುವರ್ಧನನು ಬೀರೂರು ತಾಮ್ರ ಪಟಗಳಲ್ಲಿ ತಾನು ಸಮಗ್ರ ಕರ್ನಾಟದೇಶ ಭೂವರ್ಗ ಭರ್ತಾರನಾಗಿದ್ದನೆಂದು ಹೇಳಿಕೊಂಡಿದ್ದಾನೆ. 7ನೆಯ ಶತಮಾನದಲ್ಲಿ ಚಾಲುಕ್ಯರಾಣಿ 'ವಿಜಯಾಂಕಾ'ಳು ಸಂಸ್ಕೃತ ಕವಯಿತ್ರಿ ಕೂಡ ಆಗಿದ್ದು ತನ್ನನ್ನು 'ಕರ್ನಾಟಕ ರಾಜಪ್ರಿಯಳೆಂದು' ಹೇಳಿಕೊಂಡಿದ್ದಾಳೆ. ಬಾದಾಮಿಯ ಚಾಲುಕ್ಯರ ಸೇನೆಯನ್ನು 'ಕರ್ನಾಟಬಲ' ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಜಯಕೀರ್ತಿಯ 'ಛಂದೋನುಶಾಸನದಲ್ಲಿ ಕರ್ನಾಟೇಶ್ವರ ಕಥಾ' ಎಂಬ ಉಲ್ಲೇಖವಿದೆ”.[1] ಈ ಎಲ್ಲಾ ಅಂಶಗಳ ಆಧಾರದ ಮೇಲೆ ವಿದ್ವಾಂಸರಿಂದ ಸ್ವೀಕೃತವಾದ ದೃಷ್ಟಿಯೆಂದರೆ ಕರುನಾಡು ಎನ್ನುವುದಕ್ಕೆ 'ದೊಡ್ಡನೆಲ' ಅಥವಾ ಎತ್ತರದ ಪ್ರದೇಶ ಎಂಬ ಅರ್ಥಗಳಿರುವುದರಿಂದ ಈ ಹೆಸರು ಬಂದಿದೆ ಎಂಬುವುದು. ನಿರ್ವಿವಾದ ಇದು ಕರ್ನಾಟಕ ಅಥವಾ ಕನ್ನಡ ಭಾಷೆಯ ಪ್ರಾಚೀನತೆಯ ಮೊದಲ ಮೆಟ್ಟಿಲು.

**ಗ್ರೀಕ್ ಪ್ರಹಸನ:**

ಈಜಿಪ್ಟ್ ದೇಶದಲ್ಲಿ ಸಿಕ್ಕ ಒಂದು ಗ್ರೀಕ್ ಪ್ರಹಸನದಲ್ಲಿ ಕನ್ನಡ ಮಾತುಗಳಿವೆಯೆಂದು, ಕನ್ನಡವು ಕ್ರಿ.ಶ. 2ನೆಯ ಶತಮಾನಕ್ಕಿಂತ ಮುಂಚೆ ದಕ್ಷಿಣ ಕನ್ನಡ ಸಮುದ್ರ ತೀರದಲ್ಲಿ ವ್ಯವಹಾರ ಭಾಷೆಯಾಗಿತ್ತೆಂದು ಹಲವು ಪಂಡಿತರು ಸಿದ್ಧಗೊಳಿಸಿದ್ದಾರೆ. ಅವರಲ್ಲಿ ಗೋವಿಂದ ಪೈಯವರು ಗ್ರೀಕ್ ಮೂಲವನ್ನೇ ಪರಿಶೋಧಿಸಿ ಅಲ್ಲಿಯ ಮಾತು ಕನ್ನಡವೆಂಬುದನ್ನು ತೋರಿಸಿ ಕೆಲವೊಂದು ಪದಗಳನ್ನು ಗುರುತಿಸಿದ್ದಾರೆ. ಆ ಪದಗಳೆಂದರೆ. 'ಅಲ್ಲೆ, ಕರಪಿಸಾ, ಐತಾ, ಅಂತಾಲಲ್ಲೆ.'

**ಮಹಾಭಾರತ:**

ಮಹಾಭಾರತದ ಕೆಲ ಸಂದರ್ಭಗಳಲ್ಲಿ 'ಕರ್ನಾಟಕ' ಎಂಬ ಹೆಸರಿನ ಉಲ್ಲೇಖ ಬರುತ್ತದೆ. ಉದಾ– ಮಹಾಭಾರತದ ಭೀಷ್ಮಪರ್ವದಲ್ಲಿ – ಕರ್ನಾಟಕ, ಸಭಾಪರ್ವದಲ್ಲಿ – ಕರ್ನಾಟ, ಕುಂಭಕೋಣಂ ಆವೃತ್ತಿಯಲ್ಲಿ – ಕರ್ನಾಟಕ, ಪುಣೆ ಆವೃತ್ತಿಯಲ್ಲಿ –ಕುಂತಳ/ ಉನ್ನತ್ಯಕ (ಎತ್ತರದ ನೆಲ)'.[2]

**ಗಾಥಾಸಪ್ತಸತಿ:**

ಇದು ಪ್ರಾಕೃತ ಭಾಷೆಯಲ್ಲಿಯ ಪದ್ಯಕಾವ್ಯ. ಇದನ್ನು ಸಂಕಲನ ಮಾಡಿದವರು ಶಾತವಾಹನರ ಅರಸ ಹಾಲರಾಜ. ಕ್ರಿ.ಶ 1–2 ನೆಯ ಶತಕದಲ್ಲಿದ್ದ ಇವನು

'ಕುಂತಲಜನಪದೇಶ್ವರ' ಎಂದು ತನ್ನನ್ನು ಕರೆದುಕೊಂಡಿದ್ದಾನೆ. ಇದರಲ್ಲಿ ಕೆಲವೊಂದು ಕನ್ನಡದ ಪದಗಳು ಪ್ರಯೋಗಗೊಂಡಿವೆ. ಉದಾ : ನಾಮಪದಗಳು – ಅತ್ತಾ (ಅತ್ತೆ ), ಪೊಟ್ಟಿ (ಹೊಟ್ಟೆ ), ತುಪ್ಪ; ಕ್ರಿಯಾಪದಗಳು – ಪೆಟ್ಟು (ಹೊಡೆ), ತೀರ್ (ಶಕ್ಯವಾಗು); ಕವಯಿತ್ರಿಯರು – ರೇವಾ, ರೋಹಾ, ಮಾಧವಿ, ಅನುಲಕ್ಷಿ.

**ಟಾಲೆಮಿಯ ಬರಹ:**

ಕ್ರಿ.ಶ 150 ರಲ್ಲಿ ರಚನೆಯಾದ ಟಾಲೆಮಿಯ ಬರಹದಲ್ಲಿ ಕರ್ನಾಟಕದ 10 ಸ್ಥಳವಾಚಕ ಪದಗಳು ಸಿಕ್ಕಿವೆ. ಅವು ಇಂದು ಅಲ್ಪ–ಸ್ವಲ್ಪ ವ್ಯತ್ಯಾಸದೊಂದಿಗೆ ಅಸ್ತಿತ್ವದಲ್ಲಿ ಕೂಡ ಇವೆ. ಅವುಗಳೆಂದರೆ – ಪೌನ್ನಾಟ–ಪುನ್ನಾಟ, ಬಾದಿಯಾಮೊಯಿ–ಬಾದಾಮಿ, ಇಂಡೆ–ಇಂಡಿ, ಕಲ್ಲಿಗೇಸರಿ–ಕಲ್ಲಗೇರಿ, ಮೊದೇಗೌಲ–ಮುದಗಲ್, ಪೆಟರಗಾಲ–ಪಟ್ಟದಕಲ್ಲು , ತವಸಿ–ತಾವಸಿ, ಬನವಾಸ್ಸೆ–ಬನವಾಸಿ, ಪಟ್ಟಕಿಹಾಳ–ಪಟ್ಟಕಿಹಾಳ'.[3]

**ಶಿಲಪ್ಪಾದಿಕಾರಂ ಕೃತಿ:**

ಕ್ರಿ.ಶ 2ನೆಯ ಶತಮಾನದ ಈ ತಮಿಳು ಕಾವ್ಯ ಈ ನಾಡಿನ ಜನರನ್ನು 'ಕರುನಾಡರು' ಅಥವಾ 'ಕರುನಾಟಕರು' ಎಂದು ಕರೆದಿದೆ. ಚೇರನ್ ಸೆಂಗುಟ್ಟುವನ್ ಎಂಬ ಗಣ್ಯ ತಮಿಳು ಅರಸನು ನೀಲಗಿರಿಗೆ ಸಂದರ್ಶನ ನೀಡಿದ ಕಾಲದಲ್ಲಿ ಕರುನಾಟಕರ ನೃತ್ಯವನ್ನು ಕಂಡುದಾಗಿ ಹೇಳಿದ್ದಾನೆ.

**ಪಾಣಿನಿಯ ಅಷ್ಟಾಧ್ಯಾಯ:**

'ಕರ್ನಾಟಕ' ಎಂಬ ಶಬ್ದದ ಉಲ್ಲೇಖ ಕ್ರಿ.ಶ 3–4 ನೆಯ ಶತಮಾನದಲ್ಲಿದ್ದ ಪಾಣಿನಿಯ ಸಂಸ್ಕೃತ ವ್ಯಾಕರಣ ಗ್ರಂಥದಲ್ಲಿ ಕಂಡುಬರುತ್ತದೆ. ಅಲ್ಲಿ ಆತನು 'ಕರ್ಣಾಟಕ' ಎಂಬ ಒಂದು ಗೋತ್ರದ ಜನರ ವಿಚಾರವನ್ನು ಕುರಿತು ಹೇಳಿದ್ದಾನೆ.

**ಕನ್ನಡದಲ್ಲಿ ಬರೆದ ಪ್ರಾಚೀನ ಶಾಸನಗಳು:**

**ಅಶೋಕನ ಶಾಸನ:**

ಕ್ರಿ.ಶ.ಪೂ 3ನೆಯ ಶತಮಾನಕ್ಕೆ ಸೇರಿದ ಕರ್ನಾಟಕದ ಬ್ರಹ್ಮಗಿರಿ ಶಿಲಾಲೇಖದಲ್ಲಿ ದೊರೆತ ಅಶೋಕನ ಶಾಸನವೊಂದರಲ್ಲಿ ಕಾಣಿಸಿಕೊಳ್ಳುವ 'ಇಸಿಲ್' ಎಂಬ ಪದವೇ ಕನ್ನಡದ ಪ್ರಾಚೀನ ಪದ ಎಂಬುವುದು ಡಿ.ಎಲ್. ನರಸಿಂಹಾಚಾರ್ಯರ ಅಭಿಪ್ರಾಯ. 'ಇಸಿಲ್' ಎಂದರೆ ಕೋಟೆಯಿಂದಾವೃತವಾದ ಊರು ಎಂದರ್ಥ. ದೊರೆತ ಆಧಾರಗಳು ಈ ಸಾಹಿತ್ಯದ ಪ್ರಕಾರದಲ್ಲಿ ಕನ್ನಡ ನಾಡು–ನುಡಿ ಚಿಂತನೆ, ಸಂಸ್ಕೃತಿ ಹಲವಾರು ರೀತಿಯಲ್ಲಿ ಗುರುತಿಸಲಾಗಿದೆ. ಹೇಗೆ ಎಂದರೆ ಕನ್ನಡ ಸಾಹಿತ್ಯವು ಪ್ರಾಚೀನ ಕಾಲದಿಂದ ತನ್ನದೇ ಆದ ಒಂದು ವೈಭವದ ಇತಿಹಾಸವನ್ನು ತನ್ನದಾಗಿಸಿಕೊಂಡು ಬಂದಿದೆ. ಸಾಹಿತ್ಯ ಹುಡುಕುತ್ತಾ ಹೋದರೆ ಇತಿಹಾಸದ ಆಶ್ರಯವನ್ನು ಪಡೆದುಕೊಂಡಿದೆ. ಸಾಹಿತ್ಯದ ಪ್ರಾಚೀನತೆ ಮತ್ತು ಪರಂಪರೆಗೆ ಇತಿಹಾಸವೇ ಮೂಲಾಧಾರ. ಪ್ರಾಚೀನ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಪರಂಪರೆ ಎಂದರೆ, ಪ್ರಾಚೀನ ಕಾಲದಿಂದ ಹಿಡಿದು ಇಲ್ಲಿಯವರೆಗೆ ಬೆಳೆದು ಬಂದ ದಾರಿ ವೈಭೋಗವನ್ನು ತಿಳಿಯುವುದು. ರಾಜ್ಯ ರಾಜವಂಶಗಳು, ನಾಗರಿಕತೆಗಳು ಮತ್ತು ಪ್ರಮುಖ ಘಟನೆಗಳ ಅಧ್ಯಯನವನ್ನು ಒಳಗೊಂಡಿದೆ. ಇಂತಹ ಚರಿತ್ರೆಯು ಸಾಹಿತ್ಯಕ್ಕೆ ಮೂಲ ಆಕರ ಸಾಮಗ್ರಿಗಳಾಗಿವೆ. ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಖಚಿತವಾದ ಪ್ರಾಚೀನ ಪರಂಪರೆ ಇರುತ್ತದೆ. ಮೊಟ್ಟಮೊದಲನೆಯದಾಗಿ ದೊರೆತ ಹಲ್ಮಿಡಿ ಕನ್ನಡ ಶಿಲಾಲೇಖವು ಕ್ರಿ. ಶ.

5–6 ನೇಯ ಶತಕದ್ದಾಗಿದೆ. ಅದು ಗದ್ಯದಲ್ಲಿದ್ದರೂ ಕನ್ನಡ ಭಾಷೆಗೆ ಸಾಹಿತ್ಯ ಸಂಸ್ಕಾರವು ಅದಕ್ಕೆ ಪೂರ್ವದಿಂದಲೂ ದೊರೆತಿರಬೇಕೆಂದು ಅದು ಸ್ಪಷ್ಟವಾಗಿ ಸೂಚಿಸುತ್ತದೆ. ಸುಮಾರು 450ರಲ್ಲಿ ದೊರೆತ ಹಲ್ಮಿಡಿ ಶಾಸನವು ಕನ್ನಡ ಸಿರಿಮೊಳಕೆಯನ್ನು ಚಿಗುರಿಸಿಕೊಂಡು ಬಂದಿದೆ. ಈ ಶಾಸನದಲ್ಲಿ ಕನ್ನಡ ಭಾಷೆಯು ಪೂರ್ವಹಳೆಗನ್ನಡದ ಅಸ್ತಿತ್ವವನ್ನು ತೋರಿಸಿಕೊಟ್ಟಿದೆ.

ನಂತರ ಈ ಶಾಸನವು ಕನ್ನಡ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ತೋರಿಸಿಕೊಡುತ್ತದೆ. ಅಂದರೆ, ಕಲಭೋರನ ಶತ್ರುವಾದ ಕಾಕುಸ್ಥವರ್ಮನು ಆಳುತ್ತಿದ್ದಾಗ ನರಿದಾಳಿವಿಳೆ ನಾಡನ್ನು ಆಳುತ್ತಿದ್ದ ಮೃಗೇಶ ಮತ್ತು ನಾಗೇಂದ್ರ ಎನ್ನುವವರು ಕೇಕೇಯ ಮತ್ತು ಪಲ್ಲವರ ಮೇಲೆ ಹೋರಾಡಿ ಜಯಗಳಿಸಿದ ವಿಜಯ ಅರಸ ಎನ್ನುವವನಿಗೆ ಹಲ್ಮಿಡಿ ಮತ್ತು ಮಳವಳ್ಳಿ ಎಂಬ ಗ್ರಾಮಗಳನ್ನು ಬಾಳ್ಗಿಚ್ಚಾಗಿ ಕೊಟ್ಟಿದ್ದು ಈ ಶಾಸನದಲ್ಲಿ ಹೇಳಲಾಗಿದೆ. ಹೀಗೆ ದಾನ, ಧರ್ಮ, ಶೌರ್ಯ, ನ್ಯಾಯ ಇವುಗಳನ್ನು ಒಳಗೊಂಡಿರುವ ಕನ್ನಡ ನಾಡಿನ ಹೆಮ್ಮೆ ಮತ್ತು ಸಂಸ್ಕೃತಿಯನ್ನು ಈ ಶಾಸನವು ಎತ್ತಿ ತೋರಿಸುತ್ತದೆ. ಅದೇ ರೀತಿಯಾಗಿ 7ನೇ ಶತಮಾನದಲ್ಲಿ ದೊರೆತಂತಹ ಬಾದಾಮಿ ಶಾಸನವು ಹಳಗನ್ನಡ ಲಿಪಿಯಲ್ಲಿದೆ. ಸು. ಅದೇ ಕಾಲದ್ದೆಂದು ತೋರುವ ಶಾಸನ ಪದ್ಯವೊಂದರಲ್ಲಿ ಗುಣಮಧುರಾಂಕನೆಂಬ ವ್ಯಕ್ತಿಯ ಸೊಗಸಾದ ಚಿತ್ರವಿದೆ. ಕ್ರಿ. ಶ. 7ನೇ ಶತಕದ್ದೆಂದು ನಿರ್ವಿವಾದ. ಬಾದಾಮಿ ಶಾಸನದಲ್ಲಿ "ಕಲಿಯುಗ ವಿಪರೀತನ್" ಎಂಬ ಇನ್ನೊಬ್ಬ ವ್ಯಕ್ತಿಯ ಚಿತ್ರವು ಮೂರು ತ್ರಿಪದಿಯ ಪದ್ಯಗಳಲ್ಲಿ ಅಷ್ಟೇ ಸೊಗಸಾಗಿ ಬಂದಿದೆ. ಅದೇ ಕಾಲದಲ್ಲಿ ರಚಿತವಾದ ಶ್ರವಣ ಬೆಳಗೊಳದ ಹಲವಾರು ಕಾವ್ಯಗುಣವುಳ್ಳ ಶಾಸನ ಪದ್ಯಗಳಿದ್ದು ಒಂದರಲ್ಲಿ ನಂದಿಸೇನ ಮುನಿಯ ಸ್ವಭಾವ ವರ್ಣನೆ ಇದೆ. ಹೀಗೆ ನಮಗೆ ದೊರೆತಿರುವ ತೀರ ಹಳೆಯ ಶಾಸನಗಳನ್ನು ಗಮನಿಸಿದರೆ ವ್ಯಕ್ತಿ ಚಿತ್ರಗಳ ರೂಪದಲ್ಲಿ ಕನ್ನಡ ಕಾವ್ಯವು ಕಣ್ತೆರೆಯಿತೆಂಬುದನ್ನು ಕಾಣುತ್ತೇವೆ. ಹಲ್ಮಿಡಿ ಕಾಲದಿಂದ ಗತಕಾಲದವರೆಗೆ ಕರ್ನಾಟಕದ ಎಲ್ಲಾ ಕಡೆಗಳಲ್ಲಿ ಎಣಿಕೆ ಮೀರಿದ ಕಲ್ಬರಹಗಳು ರಚಿತವಾಗಿ ಶಾಶ್ವತವಾಗಿ ನಿಂತಿರುತ್ತವೆ. ಈ ಶಾಸನದಲ್ಲಿ ತ್ರಿಪದಿ ಕಂಡು ಬರುತ್ತದೆ. ಕಪ್ಪೆ ಅರಭಟನ್ ಎಂಬ ಪ್ರಸಿದ್ಧನಾದ ವ್ಯಕ್ತಿಯಾಗಿದ್ದನು. ಇದರಲ್ಲಿ ನಾಡಿನ ಸಂಸ್ಕೃತಿ ಮತ್ತು ಕನ್ನಡಿಗರ ವ್ಯಕ್ತಿತ್ವವನ್ನು ತಿಳಿಸಿ ಕೊಡುತ್ತದೆ. ಇದು ಈ ರೀತಿಯಾಗಿದೆ. "ಸಾಮಾನ್ಯರಿಗೆ ಸಾಮಾನ್ಯನಾಗಿ, ದುಷ್ಟರಿಗೆ ಪ್ರತಿಕಾರ ದುಷ್ಟನಾಗಿ, ಆಸರೆ ಅಥವಾ ರಕ್ಷಣೆಯನ್ನು ಕೇಳಿದಾಗ ಸಾಕ್ಷಾತ್ ಪರಮಾತ್ಮನಂತೆ ರಕ್ಷಕನಾಗಿ ಆಸರೆಯನ್ನು ನೀಡುತ್ತಾನೆ". ಇದು ನಮ್ಮ ಕನ್ನಡಿಗರ ಶೌರ್ಯ, ಧೀರತನವನ್ನು ವಿವರಿಸಲಾಗಿದೆ. ಈ ತ್ರಿಪದಿ ಈ ರೀತಿಯಾಗಿದೆ. "ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್ ಮಾಧವನೀತನ್ ಪೆರನಲ್ಲ" ಹೀಗೆ ಕನ್ನಡಿಗರ ಮತ್ತು ಕನ್ನಡ ನಾಡಿನ ವರ್ಣನೆ ಇದೆ.

ನಂತರ 8–9ನೇ ಶತಮಾನದಲ್ಲಿ ದೊರೆತಂತಹ ಕೃತಿ ಲಾಕ್ಷಣಿಕ ಗ್ರಂಥ ಪ್ರಥಮ ಉಪಲಬ್ಧ ಗ್ರಂಥವಾಗಿದೆ. ಇದರಲ್ಲಿ ನಮ್ಮ ಕನ್ನಡ ನಾಡಿನ ವರ್ಣನೆ ಸ್ಥಳಗಳು ಮತ್ತು ಕನ್ನಡಿಗರ ವರ್ಣನೆ ಕಾಣಬಹುದಾಗಿದೆ. ನಮ್ಮ ಕನ್ನಡ ನಾಡು "ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿಕೊಂಡಿತ್ತು. ಆ ನಾಡಲ್ಲಿ ಕನ್ನಡ ಮಾತನಾಡುವಂತಹ ಜನ ಸಮುದಾಯ ಒಳಗೊಂಡ ಸುಂದರವಾದ ಸಮಾಜ ವಾಸವಾಗಿತ್ತು. ಅವರು ವಿಶೇಷವಾದ ಸಮುದಾಯವಾಗಿತ್ತು". ರಾಷ್ಟ್ರಕೂಟರ ಕಾಲದಲ್ಲಿ ಕವಿರಾಜಮಾರ್ಗ 9ನೇ ಶತಮಾನದಂತಹ ಕೃತಿಯೊಂದಿಗೆ ಸಾಹಿತ್ಯವು ವಿಕಸಿಸಿತು. ಪೂರ್ವಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಕಾಲಗಳ ಮೂಲಕ ಬೆಳೆದು, ಪಂಪ, ಪೊನ್ನ, ರನ್ನರಂತಹ ಮಹಾನ್ ಕವಿಗಳ ಕೊಡುಗೆಗಳನ್ನು ಮತ್ತು ಜೈನ, ವೀರಶೈವ, ವೈಷ್ಣವ ಪಂಥಗಳ ಪ್ರಭಾವವನ್ನು ಕಂಡಿದೆ. ಹಾಗೆ,

ಸಾಹಿತ್ಯದ ಅಧ್ಯಯನ ನಿರಂತರವಾದದ್ದು, ಅಭ್ಯಸಿಸಿದಷ್ಟು ಹೊಸತಾದ ಅನುಭವ ಮತ್ತು ಪರಮಾನಂದವನ್ನು ನೀಡುತ್ತದೆ. ಇಂತಹ ಸಂಶೋಧನೆಯಿಂದ ಅವುಗಳಲ್ಲಿ ಬಹುಭಾಗವು ಬೆಳಕಿಗೆ ಬಂದಿರುವುದೇನೋ ನಿಜ. ಆದರೆ ಯಾರ ಕಣ್ಣಿಗೂ ಬೀಳದ, ಬಿದ್ದರೂ ಬೆಳಕಿಗೆ ಬಾರದ ಹಲವಾರು ಶಾಸನಗಳು ಇನ್ನೂ ಇರುವ ಸಂಭವವಿದೆ. ಇವೆಲ್ಲವುಗಳಲ್ಲಿ ಕನ್ನಡ ಕಾವ್ಯದ ಒಂದು ವಿಶಿಷ್ಟ ಪ್ರಕಾರವಾದ ವ್ಯಕ್ತಿ ಚಿತ್ರವು ಗುಣದಲ್ಲಿಯೂ, ಗಾತ್ರದಲ್ಲಿಯೂ ಸ್ವಂತ ಕಳೆಯಿಂದ ಹೊಳೆಯುತ್ತದೆ. ಸಾಮಾನ್ಯವಾಗಿ ಶಿಲಾಲೇಖಗಳು ಒಂದು ಬಗೆಯ ರಾಜಕೀಯ ಮತ್ತು ಧಾರ್ಮಿಕ ದಾಖಲೆಗಳು, ಕಾವ್ಯವೆಂದು ಉದ್ದೇಶಿಸಿ ಅವುಗಳನ್ನು ಮೊದಲಿನಿಂದ ಕೊನೆಯವರೆಗೆ ಬರೆದಿರುವುದಿಲ್ಲ. ರಾಜರ, ವೀರರ ಶೌರ್ಯ, ಸಾಹಸ, ವಂಶಾವಳಿ, ಬಿರುದಾವಳಿ ಇವು ಶಾಸನಗಳ ಬಹುಭಾಗವನ್ನು ಆಕ್ರಮಿಸಿರುತ್ತದೆ. ಅವಕ್ಕೆ ದಾನ ಪತ್ರದ ಸ್ವರೂಪವಿರುತ್ತದೆ. ಇದೆಲ್ಲ ಇದ್ದರೂ ಕಾವ್ಯಗುಣವುಳ್ಳ ಭಾಗವು ಸತ್ವದಲ್ಲಿ ಗಾತ್ರದಲ್ಲಿ ಕಡಿಮೆಯಾಗಿಲ್ಲ ಚಾರಿತ್ರಿಕ ವ್ಯಕ್ತಿಗಳ ಗುಣವರ್ಣನೆಯಲ್ಲಿ ಈ ಕಾವ್ಯಗುಣವೇ ಪ್ರಮುಖವಾಗಿದೆ.

ಸಾಹಿತ್ಯದ ಅಧ್ಯಯನ ಮಾಡುತ್ತಾ ಹೋದರೆ ಹೊಸ ಹೊಸ ವಿಚಾರ, ಸೃಜನಾತ್ಮಕ ಅಂಶಗಳನ್ನು ಉಣಬಡಿಸುತ್ತದೆ. ಇದು 'ನಿಚ್ಚಂ ಪೊಸತು' ಎಂದು ಕವಿ ತನ್ನ ಸೃಷ್ಟಿಯನ್ನು ಕುರಿತು ಅಚ್ಚರಿ ಪಟ್ಟುದು ಸಾಹಿತ್ಯದ ಇಂಥ ಅಗಾಧತೆಯನ್ನು ಕುರಿತಂತೆಯೋ ಆಗಿದೆ. ಅಂತೆಯೇ ಮಹಾಕವಿ ಪಂಪ "ಕ್ಷಯಮಣಮಿಲ್ಲ ಕೇಳ್ದು ಕಡೆಗಂಡವನು ಆವನುಮಿಲ್ಲದಲ್ ತದಕ್ಷಯನಿಧಿ ತಾನೆ ತನ್ನನೋದೋಲಗಿಪಂಗರಿದಿಲ್ಲೆನಿಪ್ಪ ವಾಙ್ಮಯಮ್"[4] ಎಂದು ಸಾಹಿತ್ಯದ ನಿರಂತರತೆ ಮತ್ತು ಅಕ್ಷಯಗುಣವನ್ನು ವಿವರಿಸಿದ್ದಾನೆ.

"ಪ್ರಾಚೀನತೆಯ ದೃಷ್ಟಿಯಿಂದ ಕನ್ನಡ ಸಾಹಿತ್ಯಕ್ಕೆ ಭಾರತೀಯ ಭಾಷೆಗಳಲ್ಲಿ ಸಂಸ್ಕೃತ, ಪ್ರಾಕೃತ ಮತ್ತು ತಮಿಳಿನ ಅನಂತರದ ಸ್ಥಾನ ಸಲ್ಲುತ್ತದೆ. ಕ್ರಿ.ಶ. 5ನೆಯ ಶತಮಾನದಿಂದ ಇಲ್ಲಿಯವರೆಗೆ ಶಾಸನ ಮತ್ತು ಗ್ರಂಥಗಳ ರೂಪದಲ್ಲಿ ಕನ್ನಡ ಸಾಹಿತ್ಯ ಅವಿಚ್ಛಿನ್ನವಾಗಿ ಬೆಳೆಯುತ್ತ ಬಂದಿದೆ. ಕನ್ನಡ ಭಾಷೆ ಕರ್ನಾಟಕ ಶಬ್ದಾನುಶಾಸನದಲ್ಲಿ ಅಷ್ಟಾದಶ ಮಹಾಭಾಷೆಗಳಲ್ಲಿ ಒಂದು ಎಂದು ಹೇಳಲ್ಪಟ್ಟ ಭಾಷೆ" ಕವಿರಾಜಮಾರ್ಗಕ್ಕಿಂತ ಹಿಂದಿನ ಯಾವೊಂದು ಸಮಗ್ರವಾದ ಕನ್ನಡ ಕಾವ್ಯ ಇದುವರೆಗೆ ದೊರಕಿಲ್ಲವಾದರೂ ಅದರಲ್ಲಿ,

**"ಮಿಗೆ ಕನ್ನಡ ಕಬ್ಬಂಗಳೊ**
**ಳಗಣಿತಗುಣ ಗದ್ಯಪದ್ಯ ಸಂಮಿಶ್ರಿತಮಂ**
**ನಿಗದಿಸುವರ್ ಗದ್ಯ ಕಥಾ**
**ಪ್ರಗೀತಿಯಂ ತಚ್ಚಿರಂತಾನಾಚಾರ್ಯರ್ಕಳ್"[5]**

ಎಂದು, "ಕನ್ನಡ ದೇಶಿಯಲ್ಲಿ ಪುರಾಣ ಕವಿಗಳ ಸಂತತ ಗತ ಮಾರ್ಗವೂ 'ಪುರಾಣ ಕಾವ್ಯ ಪ್ರಯೋಗವೂ ಇದೆಯೆಂದು ಹೇಳಿರುವುದರಿಂದ, ತನಗಿಂತ ಪೂರ್ವಿಕರಾದ ಕವಿಗಳನ್ನು ಹೆಸರಿಸುವದರಿಂದ ಆತನ ಕಾಲಕ್ಕೆ ಹಿಂದೆ ಹಲವು ಪ್ರಸಿದ್ಧ ಕನ್ನಡ ಕವಿಗಳು ಆಗಿ ಹೋಗಿದ್ದರೆಂದೂ ಅವರ ಗ್ರಂಥಗಳು ಪ್ರಾಯಶಃ ಆತನ ಕಾಲದಲ್ಲಿ ಇದ್ದಿರಬೇಕೆಂದೂ ಆತನಿದ್ದ ಕಾಲ ಖಂಡಿತವಾದುದರಿಂದ ಕ್ರಿ.ಶ 9ನೆಯ ಶತಕಕ್ಕೆ ಕೆಲವಾದರೂ ಶತಮಾನಗಳ ಹಿಂದಿನಿಂದಲೇ ಕನ್ನಡದಲ್ಲಿ ಗದ್ಯ ಪದ್ಯಾತ್ಮಕವಾದ ಸಾಹಿತ್ಯವು ಸಾಕಷ್ಟು ಸಮೃದ್ಧವಾಗಿತ್ತೆಂದು ವ್ಯಕ್ತವಾಗುತ್ತದೆ." ಆದರೆ ಆ ಕಾಲದ ಕವಿಗಳೆಂದು ಗುರುತಿಸಲ್ಪಟ್ಟ ಕವಿಗಳಲ್ಲಿ ಗುಣವರ್ಮ-1 ರ ಕೆಲವು ಪದ್ಯಗಳು ದೊರಕಿರುವದು ಬಿಟ್ಟರೆ ಅಸಗ, ಮನಸಿಜ, ಗುಣನಂದಿ- ಇವರ ಯಾವ ಕೃತಿಗಳೂ ದೊರೆತಿಲ್ಲ.

ನಾಡಿನ ವಿವಿಧ ಭಾಗಗಳ ಮತ್ತು ನಗರಗಳ ವರ್ಣನೆಗಳೂ ಬಂದಿರುತ್ತವೆ. ಈ ಎಲ್ಲ ವರ್ಣನೆಗಳಲ್ಲಿ ಕೆಲವು ಸಲ ಒಂದೇ ಪಡಿಯಚ್ಚಿನಲ್ಲಿ ಎರಕ ಹೊಯ್ದಂತೆ ತೀರುವ ಸಾಂಪ್ರದಾಯಿಕತೆಯಿಂದ ಅತಿಶಯೋಕ್ತಿಯಿದೆ. ಜೊತೆಗೆ ಪ್ರತ್ಯಕ್ಷ ಪರಿಚಯ ಮತ್ತು ಸಂಪರ್ಕದಿಂದ ಹೊರ ಹೊಮ್ಮಿದ ವೀರಕಾವ್ಯದ ಸೊಗಸಿದೆ, ವ್ಯಕ್ತಿಚಿತ್ರದ ನಿಚ್ಚಳವಿದೆ. ಈ ಸಂಕಲನದಲ್ಲಿ ಉದಾಹರಿಸಿರುವ ಆದಿಗೌಂಡನ ಮತ್ತು ಕುವರಲಕ್ಷ್ಮಣ ವ್ಯಕ್ತಿಚಿತ್ರಗಳನ್ನು ನಿದರ್ಶನಕ್ಕೆಂದು ನೋಡಬಹುದು. ಅಲ್ಲಲ್ಲಿ ಉನ್ನತವಾದ, ಅದ್ಭುತವಾದ ಕಲ್ಪಕತೆಯೂ ಶಾಸನ ಕಾವ್ಯದಲ್ಲಿ ಮಿನುಗಿದೆ. ಇದಕ್ಕೆ ಸರಸ್ವತಿಯನ್ನು ಕುರಿತು ಮಾಡಿದ ಪ್ರಾರ್ಥನಾ ಪದ್ಯವನ್ನು ನಿರೂಪಿಸಬೇಕು. ಬ್ರಹ್ಮನು ವಿಸ್ತಾರವಾಗಿ ನಿರ್ಮಿಸಿದ ವಿಶ್ವವನ್ನು ಅಂದರೆ ಬ್ರಹ್ಮಾಂಡದಲ್ಲಿಯ ತೇಜೋಗೋಲಗಳನ್ನು ಮಣಿಮಾಲೆಯಾಗಿ ವಿಸ್ತರಿಸಿ ತನ್ನ ಹಸ್ತದಿಂದ ಹಿಡಿದು ತನ್ನ ಶರಣು ಹೋಗುವವರಿಗೆ ಲೇಸನ್ನು, ಪ್ರೇರಿಸಲೋಸುಗ ಯಾವ ಹಗಲಿರುಳು ಜಪಿಸುತಿರುವಳೋ ಆ ಭಾರತಿ ನಮ್ಮ ಜಿಹ್ವೆಯಲ್ಲಿ ನಿರ್ಮಲವಾಗಿ ಸಂತತವೂ ಇರಲಿ ಎಂದು ಈ ಪದ್ಯದಲ್ಲಿ ಕವಿ ಪ್ರಾರ್ಥಿಸಿದ್ದಾನೆ. ಸರಸ್ವತಿಯ ಸ್ವರೂಪದ ಮತ್ತು ಕಾರ್ಯ ವಿಶೇಷದ ಭವ್ಯ ವರ್ಣನೆ ಈ ಬಗೆಯಾಗಿ ಕನ್ನಡ ಕಾವ್ಯದಲ್ಲಿ ಬೇರೆಡೆಗೆ ಎಲ್ಲಿಯೂ ಬಂದಿಲ್ಲ. ಸಂಸ್ಕೃತ ಕಾವ್ಯದಲ್ಲಿಯೂ ನಮ್ಮ ಜಾಗತಿಕ ಕಾವ್ಯದಲ್ಲಿಯೂ ಇಂಥ ಕಲ್ಪನೆ ಇರುವುದೋ ಹೇಗೆ ಪರಿಶೋಧಿಸಬೇಕು.

**ವಡ್ಡಾರಾಧನೆ:**

ಇದು ವಿಶಿಷ್ಟವಾದ ಜೈನ ಧಾರ್ಮಿಕ ಕಥೆಗಳ ಸಂಗ್ರಹ. 19 ಜೈನ ಕತೆಗಳನ್ನು ಹೊಂದಿದ ಈ ಕೃತಿಗೆ ಸಂಸ್ಕೃತ ಹರಿಶೇಣನ 'ಕಥಾಕೋಶ'ವೇ ಮೂಲ ಆಕರ. ಇದರ ಮೂಲ ಪ್ರತಿಯಲ್ಲಿ ಈ ಪೇಳ್ದ ಹತ್ತೊಂಬತ್ತು ಕಥೆಗಳು ಶಿವಕೋಟ್ಯಾಚಾರ್ಯರ ಪೇಳ್ದ ವಡ್ಡಾರಾಧನೆಯ ಕವಚವು ಮಂಗಳ ಮಹಾಶ್ರೀ ಎಂದಿದೆ. ಆದರೆ ವಿದ್ವಾಂಸರ ಪ್ರಕಾರ ಇದರ ಕರ್ತೃ ಬ್ರಾಜಿಷ್ಣು. ಇದರ ಮೂಲ ಹೆಸರು 'ಭಗವತಿ ಆರಾಧನೆ ಟೀಕಾ'. ಗುಣಭದ್ರನ ಮಹಾಪುರಾಣದ ಒಂದು ಶ್ಲೋಕ ವಡ್ಡಾರಾಧನೆಯಲ್ಲಿ ಕಂಡುಬರುವುದರಿಂದ ಇದರ ಕಾಲ 10ನೆಯ ಶತಮಾನ ಎಂಬುವುದು ಆ. ನೇ. ಉಪಾಧ್ಯೆಯರನ್ನೊಳಗೊಂಡ ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ.

**ಸಮಾರೋಪ:**

ಒಟ್ಟಾರೆ ಈ ಆಧಾರಗಳಿಂದ ಕನ್ನಡವು ಕ್ರಿ.ಶ 1–2ನೆಯ ಶತಮಾನಗಳ ಹಿಂದಿನಿಂದಲೂ ಗ್ರಾಂಥಿಕ ಭಾಷೆಯಾಗಿ ಬೆಳೆಯತೊಡಗಿತ್ತು ಎಂಬುವುದು ಸ್ಪಷ್ಟವಾಗುತ್ತದೆ. ಮುಂದೆ ಕ್ರಿ.ಶ 450ರಲ್ಲಿ ಅದು ಶಾಸನ ಭಾಷೆಯಾಗಿ, 7ನೆಯ ಶತಮಾನಕ್ಕೆ ಸಾಹಿತ್ಯ ಭಾಷೆಯಾಗಿ ರೂಪಗೊಂಡಿತು. 9ನೆಯ ಶತಮಾನಕ್ಕೆ ಪ್ರೌಢಕಾವ್ಯವೊಂದಕ್ಕೆ ಮಾಧ್ಯಮವಾಗುವಷ್ಟು ಶಕ್ತಿಶಾಲಿಯಾಯಿತು. ಸದ್ಯ ಭಾರತದ ಭಾಷೆಗಳಲ್ಲಿ ಸಂಸ್ಕೃತವು ಅತ್ಯಂತ ಪ್ರಾಚೀನ ಭಾಷೆ. ಎರಡನೆ ಸ್ಥಾನ ತಮಿಳಕ್ಕೆ, ಮೂರನೆಯ ಸ್ಥಾನ ಕನ್ನಡಕ್ಕೆ. ಪ್ರಸ್ತುತ ನಮ್ಮ ಭಾಷೆಗೆ 2000 ವರ್ಷಗಳ ಇತಿಹಾಸ ಪ್ರಾಪ್ತವಾಗಿದ್ದು ಎಂಟು ಜ್ಞಾನ ಪೀಠಗಳೊಂದಿಗೆ ಶಾಸ್ತ್ರೀಯ ಸ್ಥಾನಮಾನದ ಗರಿಯನ್ನು ಹೊಂದಿದೆ. ವಿಭಿನ್ನ ಸಾಹಿತ್ಯ ಪರಂಪರೆಗೆ ಸಾಕ್ಷಿಯಾಗಿದೆ.

**ಕೊನೆ ಟಿಪ್ಪಣಿಗಳು:**

1. ಕನ್ನಡ ಸಾಹಿತ್ಯ ಚರಿತ್ರೆಯ ಹೆಜ್ಜೆಗಳು, ಡಾ. ವಾಯ್. ವಾಯ್. ಕೊಕ್ಕನವರ, ಪು. ಸಂ. 03.
2. ಅದೇ ಪು. ಸಂ. 04.
3. ಅದೇ ಪು. ಸಂ. 05.
4. ಪ್ರಾಚೀನ ಸಾಹಿತ್ಯ ಕಾವ್ಯಗಳು, ಶ್ರೀ. ಎಮ್. ವಾಯ್. ವ್ಯಾಕೋಳಿ, ಪು. ಸಂ. 01.
5. ಕನ್ನಡ ಸಾಹಿತ್ಯ ಚರಿತ್ರೆ, ತ. ಸು. ಶಾಮರಾವ್, ಪು. ಸಂ. 02.

**ಪರಾಮರ್ಶನ ಗ್ರಂಥಗಳು:**

1. ಕನ್ನಡ ಸಾಹಿತ್ಯ ಚರಿತ್ರೆ – ತ. ಸು. ಶಾಮರಾಯ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು 2012.
2. ಕನ್ನಡ ಸಾಹಿತ್ಯ ಚರಿತ್ರೆಯ ಮುಂದುವರಿಕೆ – ಸಂ. ಡಾ. ಶ್ರೀನಿವಾಸ ಹಾವನೂರ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಬೆಂಗಳೂರು 2006.
3. ಕನ್ನಡ ಸಾಹಿತ್ಯ ಚರಿತ್ರೆ ರಂ. ಶ್ರೀ. ಮುಗಳಿ – ಗೀತಾ ಬುಕ್ ಹೌಸ್ ಪ್ರಕಾಶಕರು, ಮೈಸೂರು 2022.
4. ಹೊಸ ಕನ್ನಡ ಭಾಷಾವ್ಯಾಸಂಗ – ಡಾ. ಸಂಗಮೇಶ ಸವದತ್ತಿಮಠ, ರೂಪರಶ್ಮಿ ಪಬ್ಲಿಕೇಶನ್, ಧಾರವಾಡ 2021.
5. ಕನ್ನಡ ಸಾಹಿತ್ಯ ಘಟ್ಟಗಳು – ಸಂ. ಬಸವರಾಜ ಸಾದರ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ 2019.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.